ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಕನ್ನಡ ಅಧ್ಯಯನ ವಿಭಾಗ

ಪಿಎಚ್.ಡಿ ಅಧ್ಯಯನಕ್ಕಾಗಿ ಸಲ್ಲಿಸುತ್ತಿರುವ ಪ್ರಬಂಧದ ಪೂರ್ವಭಾವಿ ಸಾರಲೇಖ

“ಎ.ಪಿ.ಮಾಲತಿ ಅವರ ಜೀವನ ಮತ್ತು ಸಾಹಿತ್ಯ”

ಮಾರ್ಗದರ್ಶಕರು

ಡಾ. ಮಹೇಶ ಚಿಂತಾಮಣಿ

ಎಂ.ಎ,ಪಿಎಚ್.ಡಿ

ಸಂಶೋಧನಾ ವಿದ್ಯಾರ್ಥಿನಿ

ತ್ರಿವೇಣಿ ಬನಸೋಡೆ

ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

2019

“ಎ.ಪಿ.ಮಾಲತಿ ಅವರ ಜೀವನ ಮತ್ತು ಸಾಹಿತ್ಯ”

ಪರಿವಿಡಿ

ಪ್ರಸ್ತಾವನೆ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಇದುವರೆಗೆ ನಡೆದಿರುವ ಅಧ್ಯಯನಗಳು

ಅಧ್ಯಯನದ ಪ್ರಸ್ತುತತೆ

ಅಧ್ಯಾಯ : 1 ಎ.ಪಿ.ಮಾಲತಿ ಅವರ ಜೀವನ

1:1 ಪರಿಸರ(ಮನೆತನದ ಹಿನ್ನಲೆ)

1:2 ಬಾಲ್ಯ ಜೀವನ ಮತ್ತ ವಿದ್ಯಾಭ್ಯಾಸ

1:3 ಕುಟುಂಬಿಕ ಜೀವನ

1:4 ಸಾಹಿತ್ಯಿಕ ಪ್ರೇರಣೆಗಳು

1:5 ಸಾಹಿತ್ಯಿಕ ಸಂಘ ಸಂಸ್ಥೆಗಳೊಡನೆ ಸಂಬಂಧ

1:6 ಪ್ರಶಸ್ತಿ ಪುರಸ್ಕಾರಗಳು ಮತ್ತು ಸಮ್ಮೇಳನ ಅಧ್ಯಕ್ಷ ಗೌರವ

1;7 ಸಾಹಿತ್ಯಿಕ ಚಿಂತನೆಗಳು

ಅಧ್ಯಾಯ : 2 ಎ.ಪಿ.ಮಾಲತಿಯವರ ಸಾಹಿತ್ಯಿಕ ಕೊಡುಗೆ.

2:1 ಕಥೆಗಳು

2;2 ಕಾದಂಬರಿಗಳು

2:3 ಜೀವನ ಚರಿತ್ರೆ ಮತ್ತು ಇತರ ಕೃತಿಗಳು

ಅಧ್ಯಾಯ : 3 ಎ.ಪಿ.ಮಾಲತಿಯವರ ಕಥೆಗಳಲ್ಲಿ ಸ್ತ್ರೀ ಪಾತ್ರ ಚಿತ್ರಣ.

3;1 ಸಾಮಾಜಿಕ ನೆಲೆ

3;2 ಕೌಟುಂಬಿಕ ನೆಲೆ

3;3 ಶೈಕ್ಷಣಿಕ ನೆಲೆ

3;4 ಸ್ತ್ರೀಪರ ಕಾಳಜಿ

ಅಧ್ಯಯನ : 4 ಎ.ಪಿ.ಮಾಲತಿಯವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ ಚಿತ್ರಣ.

4;1 ಸಾಮಾಜಿಕ ನೆಲೆ

4;2 ಕೌಟುಂಬಿಕ ನೆಲೆ

4:3 ಶೈಕ್ಷಣಿಕ ನೆಲೆ

4;4 ಸ್ತ್ರೀ ಪರ ಕಾಳಜಿ

ಅಧ್ಯಾಯ : 5 ಎ.ಪಿ.ಮಾಲತಿಯವರ ಕಥನ ಸಾಹಿತ್ಯದ ವಸ್ತು.

5:1 ವಸ್ತುವಿನ ನೆಲೆ

5:2 ಭಾಷಾ ಶೈಲಿ

5:3 ಅಭಿವ್ಯಕ್ತಿ ನೆಲೆ

ಸಮಾರೋಪ

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಛಾಯಾಚಿತ್ರಗಳು

ಪ್ರಸ್ತಾವನೆ;

ಪ್ರಪಂಚದ ಬೇರೆ ಬೇರೆ ಭಾಷೆಗಳ ಸಾಹಿತ್ಯಗಳನ್ನು ಪರಿಶೀಲಿಸಿದಾಗ ಸಾಹಿತ್ಯ ಸೃಷ್ಟಿಯಲ್ಲಿ ಮಹಿಳೆಯರ ಪಾತ್ರ ತೀರ ಕಡಿಮೆ. ಆಧುನಿಕ ಸಾಹಿತ್ಯದಲ್ಲಿ ಮಹಿಳೆಯರು ನಿರ್ವಹಿಸಿದ ಹಾಗೂ ನಿರ್ವಹಿಸುತ್ತಿರುವ ಪಾತ್ರವನ್ನು ನೋಡಿದರೆ ಪ್ರಾಚೀನ ತತ್ವಶಾಸ್ತ್ರದ ಇತಿಹಾಸದಲ್ಲಿ ಗಾರ್ಗಿ, ಮೈತ್ರೇಯಿಯಂಥ ಕೆಲವೇ ಕೆಲವು ಹೆಸರುಗಳನ್ನು ಬಿಟ್ಟರೆ ಸಾಹಿತ್ಯ ಕ್ಷೇತ್ರದಲ್ಲಿ ಲೇಖಕಿಯರ ಸಂಖ್ಯೆ ಅತ್ಯಲ್ಪ.

ಪ್ರಪಂಚದಲ್ಲೇ ಕನ್ನಡ ವಚನಕಾರ್ತಿಯರಂಥ ಹಲವರು ಸಾಹಿತ್ಯ ರಚನೆಯಲ್ಲಿ ಭಾಗವಹಿಸಿದ ಘಟನೆ ಅತ್ಯಪೂರ್ವವಾದುದು. ಈ ರೀತಿ ಇಷ್ಟು ಸಂಖ್ಯೆಯಲ್ಲಿ ಮಹಿಳೆಯರು ಹಾಗೂ ಸಮಾಜದ ಎಲ್ಲ ವರ್ಗದ ಜನ ಸೃಜನಶೀಲ ಕ್ರಿಯೆಯಲ್ಲಿ ಪಾಲ್ಗೊಂಡ ಸಂದರ್ಭಗಳು ಇಲ್ಲವೇ ಇಲ್ಲ ಎನ್ನಬಹುದು. ತಮಿಳಿನ ಅವ್ವೆಯಾರ್,ಆಂಡಳ್, ತೆಲುಗಿನ ಮೊಲ್ಲ, ತಳ್ಳಪಾಕ,ತಿಮ್ಮಕ್ಕ, ಕಾಶ್ಮೀರಿ ಭಾಷೆಯ ಲಲ್ಲಯೋಗಿಶ್ವರಿ,ಹಿಂದಿ ಭಾಷೆಯ ಮೀರಾ ಹೀಗೆ ಕೆಲವೇ ಕೆಲವರು ನಮಗೆ ಕಾಣಸಿಗುತ್ತಾರೆ.

ಪ್ರಾಚೀನ ಕಾಲದಿಂದಲೂ ಶಿಷ್ಟ ಸಾಹಿತ್ಯದ ವಿಷಯ ಹೀಗಿದ್ದರೆ ಜನಪದ ಸಾಹಿತ್ಯದಲ್ಲಿ ಮಾತ್ರ ಮಹಿಳೆಯರದೇ ಸಿಂಹಪಾಲು. ಗ್ರಾಮೀಣ ಹಾಗೂ ಬುಡಕಟ್ಟು ಮಹಿಳೆ ಪುರುಷರಿಗೆ ಸಮಾನವಾಗಿ ಆಹಾರ ಸಂಗ್ರಹಣೆ, ಬೇಸಾಯ ಮತ್ತು ಜೀವನದ ಇನ್ನಿತರ ಎಲ್ಲ ಕ್ಷೇತ್ರಗಳಲ್ಲೂ ಸಮಾನವಾಗಿ ಪಾಲ್ಗೊಳ್ಳುತ್ತಿದ್ದಳು. ಶ್ರಮದ ನಿವಾರಣೆಗಾಗಿ ಹಾಡುತ್ತಿದ್ದಳು.ಇದೇ ಮುಂದೆ ಜನಪದ ರಾಶಿಯಾಯಿತು.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನ ಮಹಿಳೆಯರು ಸಮಾಜದ ಎಲ್ಲ ರಂಗಗಳಲ್ಲೂ ಕ್ರಿಯಾಶೀಲರಾಗುವಂಥ ಕಾಲ. ಈ ಅವಧಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡರು. ಮಹಾದೇವಿ ಅಕ್ಕನದಂತೂ ಇಡೀ ಪ್ರಪಂಚವೇ ಬೆರಗಿನಿಂದ ಬೆಚ್ಚಿ ಬೀಳಿಸುವಂಥ ವ್ಯಕ್ತಿತ್ವ. ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ ಸೆಟೆದು ನಿಂತವಳು. ಇವಳ ಜೊತೆಗೆ ಹಲವಾರು ಮಹಿಳೆಯರು ದನಿಗೂಡಿಸಿ ವಚನಗಳನ್ನು ರಚಿಸಿದರು.

ಹದಿನೇಳನೆಯ ಶತಮಾನದಿಂದ ಕನ್ನಡ ಮಹಿಳಾ ಸಾಹಿತ್ಯ ಇಪ್ಪತ್ತೊಂದನೆಯ ಶತಮಾನದ ತನಕ ಮುಂದುವರೆಯುತ್ತಿರುವುದು ಮಹತ್ವದ ಸಂಗತಿ. ಹದಿನೇಳು ಹದಿನೆಂಟನೆಯ ಶತಮಾನದ ಕಾಲಘಟ್ಟದಲ್ಲಿ ದಾಸಸಾಹಿತ್ಯಕ್ಕೆ ಮಹಿಳೆಯರು ಅಪಾರ ಸೇವೆ ಸಲ್ಲಿಸಿದರು. ಆಧುನಿಕ ಕಾಲದಲ್ಲಂತೂ ಮಹಿಳೆಯರು ಅಪಾರ ಸಂಖ್ಯೆಯಲ್ಲಿ ಸಾಹಿತ್ಯ ಸೃಷ್ಟಿ ಮಾಡುತ್ತಿದ್ದಾರೆ. ಕಂತಿಯಿಂದ ಆರಂಭಗೊಂಡಿರುವ ಕನ್ನಡ ಮಹಿಳಾ ಸಾಹಿತ್ಯ ಮೂರ್ನಾಲ್ಕು ಶತಮಾನಗಳ ಕಾಲ ಸ್ಥಗಿತಗೊಂಡು ಅನಂತರ ಸತತವಾಗಿ ಮುಂದುವರೆಯುತ್ತಿದೆ.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

ಇಪ್ಪತ್ತನೆಯ ಶತಮಾನದ ಪ್ರಾರಂಭ ಕಾಲದಿಂದ ಕನ್ನಡ ನಾಡಿನ ಮಹಿಳೆ ಇತರ ಭಾರತೀಯ ಮಹಿಳೆಯರಂತೆಯೇ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಮುಂದೆ ಬಂದಳು. ಆಧುನಿಕ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಕನ್ನಡ ಮಹಿಳೆ ಕಾಲಿಟ್ಟಳು. ಸಾಹಿತ್ಯ ಕ್ಷೇತ್ರವನ್ನು ಪರಿಶೀಲಿಸಿದಾಗ ಇಪ್ಪತ್ತನೆಯ ಶತಮಾನದಿಂದ ಮಹಿಳೆ ಎಲ್ಲ ಪ್ರಕಾರಗಲ್ಲೂ ತನ್ನ ಪ್ರತಿಭೆಯನ್ನು ತೋರುವ ಪ್ರಯತ್ನ ಮಡಿದ್ದನ್ನು ಗಮನಿಸಬಹುದು. ಬರುಬರುತ್ತಾ ಈ ಪ್ರಯತ್ನಗಳು ಬಹುಮುಖವಾಗಿ ವಿಸ್ತರಿಸಿ ಇಂದು ಮಹಿಳಾ ಸಾಹಿತ್ಯಕ್ಕೆ ಪ್ರತಿಷ್ಠಿತ ಸ್ಥಾನವನ್ನು ಲಭಿಸಿದ್ದನ್ನು ಕಾಣುತ್ತೇವೆ. ಕಥೆ, ಕಾದಂಬರಿ ಕ್ಷೇತ್ರಗಳಲ್ಲಿ ಮಹಿಳೆ ವೈವಿಧ್ಯಮಯವಾದ ಕೊಡುಗೆಯನ್ನು ನೀಡಿದ್ದಾಳೆ. ಇತ್ತೀಚಿನ ಕಾಲದಲ್ಲಿ ಕಾವ್ಯ,ವಿಮರ್ಶೆ, ಆತ್ಮಕಥೆ, ಸಂಶೋಧನೆ ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರ ಪಾತ್ರ ಪ್ರಮುಖವಾಗಿ ಕಾಣುತ್ತಿದೆ.

ಕನ್ನಡ ಸಾಹಿತ್ಯದಲ್ಲಿ ಕನ್ನಡದ ಮಹಿಳಾ ಸಾಹಿತಿಗಳಲ್ಲಿ ಶ್ರೀಮತಿ ಜಯದೇವಿತಾಯಿ ಲಿಗಾಡೆ ಯವರ ಸ್ಥಾನ ಮೊದಲನೆಯದು. 1974 ರ ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲನೆಯ ಮಹಿಳಾ ಅಧ್ಯಕ್ಷೆ ಇವರು. ಅವರು ಕನ್ನಡ ಪ್ರಚಾರ ಕನ್ನಡಿಗರೆಲ್ಲ ಕೊಂಡಾಡುವಂತಹುದಾಗಿದೆ.

ತಿರುಮಲಮ್ಮ, ಕೊಡಗಿನ ಗೌರಮ್ಮ,ತ್ರಿವೇಣಿ ಮುಂತಾದವರು ಕಾದಂಬರಿಯುಗದ ಆರಂಭದಲ್ಲಿ ಕಾದಂಬರಿ ಹಾಗೂ ಕಥಾಸಂಕಲನಗಳನ್ನು ಪ್ರಕಟಿಸಿ ಪ್ರಚಾರಗೈದ ಕನ್ನಡ ಮಹಿಳೆಯರು ಕನ್ನಡ ಲೇಖಕಿಯರಲ್ಲಿ ದಿ॥ ತ್ರಿವೇಣಿಯವರಿಗೆ ಒಂದು ಉನ್ನತ ವಿಶಿಷ್ಟ ಸ್ಥಾನವಿದೆ. ಅವರು ಸಾಮಾಜಿಕ ಕಾದಂಬರಿಗಳನ್ನಲ್ಲದೆ ಮನೋವೈ ನಿಕ ಕಾದಂಬರಿಗಳನ್ನು ರಚಿಸಿದ್ದಾರೆ.

ಎಂ.ಕೆ.ಇಂದಿರಾ,ಶೀಮತಿ ವಾಣಿ, ಡಾ॥ ಅನುಪಮಾ ನಿರಂಜನ ಮೊದಲಾದ ನೂರಾರು ಲೇಖಕಿಯರು ಕಾದಂಬರಿಗಳನ್ನು ,ಕಥಾಸಂಕಲನಗಳನ್ನು, ಲೇಖನಗಲನ್ನು,ವಿಮರ್ಶೆಯ ಸಂಕಲನಗಳನ್ನು ಬರೆದು ಪ್ರಕಟಿಸಿ ಪ್ರಸಿದ್ಧರಾಗಿದಾರೆ. ಈಗಲೂ ಈ ಕ್ಷೇತ್ರದಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಅಂತಹ ಲೇಖಕಿಯರಲ್ಲಿ ಎ.ಪಿ.ಮಾಲತಿಯವರು ಒಬ್ಬರಾಗಿದ್ದಾರೆ.

'ಎ.ಪಿ.ಮಾಲತಿಯವರ ಜೀವನ ಮತ್ತು ಸಾಹಿತ್ಯ' ಎಂಬ ವಿಷಯವು ಆಧುನಿಕ ಕನ್ನಡ ಸಾಹಿತ್ಯದ ಜನಪ್ರೀಯ ಪ್ರತಿಬಿಂಬಿತವಾಗಿರುವ ಸ್ತ್ರೀಯನ್ನು ಸವಿವರವಾಗಿ ಸ್ತ್ರೀವಾದದ ಹಿನ್ನಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸುವುದು ಅಧ್ಯಯನದ ಉದ್ದೇಶವಾಗಿದೆ.

ದಕ್ಷಿಣ ಕನ್ನಡದ ಬರಹಗಾರ್ತಿಯರಲ್ಲಿ ಎ.ಪಿ.ಮಾಲತಿಯವರಿಗೆ ಪ್ರಮುಖ ಸ್ಥಾನವಿದೆ. ಜನಪ್ರಿಯ ಕಾದಂಬರಿ ಕ್ಷೇತ್ರದಲ್ಲಿ ಅವರ ಹೆಸರು ಸುಪರಿಚಿತವಾದುದು. ಮಾಲತಿಯವರು ಅನೇಕ ಕಾದಂಬರಿಗಳನ್ನು, ಸಣ್ಣಕಥೆಗಳನ್ನು, ವೈಚಾರಿಕ ಕಥೆಗಳನ್ನಲ್ಲದೆಅನೇಕ ಲೇಖನ ಮಾಲೆಗಳನ್ನು ರಚಿಸಿದ್ದಾರೆ.ಇವರ ಕಥೆ,

ಕಾದಂಬರಿಗಳು,ತುಷಾರ,ಮಯೂರ ಮುಂತಾದ ಮಾಸಪತ್ರಿಕೆಗಳಲ್ಲಿ ಮತ್ತು ತರಂಗ,ಮಂಗಳ ಮೊದಲಾದ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದವು. ಇವರ ಲೇಖನಗಳು ಉದಯವಾಣಿ, ಸಂಯುಕ್ತ ಕರ್ನಾಟಕ ಇತರ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಆದುನಿಕ ಕನ್ನಡ ಕಾದಂಬರಿಗಳು ಬೆಳೆಯುತ್ತ ಮಾನವ ಜೀವನದ ಎಲ್ಲ ಮಜಲುಗಳನ್ನು ಆವರಿಸಿದವು.ಸ್ತ್ರೀ ಯ ಸೂಕ್ಷ್ಮ ಹಾಗೂ ಸಂಕೀರ್ಣವಾದ ಮಾನಸಿಕ ತುಮುಲಗಳನ್ನು ಕನ್ನಡದ ಮಹಿಳಾ ಕಾದಂಬರಿಕಾರ್ತಿಯರು ಕಟ್ಟಿಕೊಟ್ಟರು. ಪುರುಷ ಯಜಮಾನಿಕೆಯ ಅಂಶಗಳು ಕಾದಂಬರಿಗಳಲ್ಲಿ ಬಂದವು. ಈ ವಿಧದ ರಾಜಕಾರಣದ ಸ್ವರೂಪವನ್ನು ಎ.ಪಿ.ಮಾಲತಿಯವರ ಕಾದಂಬರಿಗಳಲ್ಲಿ ಗ್ರಹಿಸುವ ಉದ್ದೇಶ ಈ ಅಧ್ಯಯನದಲ್ಲಿದೆ.

ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಸ್ತ್ರೀ ಚಿತ್ರಣ ತಿಳಿಸುವ ಮೌಲ್ಯಗಲನ್ನು ಅಧ್ಯಯನ ಮಾಡಲು ಸಾಧ್ಯವಿದೆ. ಸ್ತ್ರೀ ಯ ಮಾನಸಿಕ ತೊಳಲಾಟಗಳು ಮತ್ತು ಕಾದಂಬರಿಗಳಲ್ಲಿ ಸ್ತ್ರೀ ಯ ಸಮಸ್ಯೆಗಳ ಬಗೆಗೆ ಇಲ್ಲಿ ಅಧ್ಯಯನ ನಡೆಸುವ ಉದ್ದೇಶವಿದೆ. ಅವರ ಕಾದಂಬರಿಗಳಲ್ಲಿ ಕಂಡುಬರುವ ಸ್ತ್ರೀ ವರ್ತನೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ತಿಳಿಯಬಹುದಾಗಿದೆ. ಸಮಾಜದಲ್ಲಿರುವ ಸಂಸ್ಥೆಗಳು ಸ್ತ್ರೀಯನ್ನು ಶೋಷಿಸುವ ನೆಲೆಗಳನ್ನು ಅರ್ಥೈಸಿಕೊಳ್ಳುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ.

ಸಾಹಿತ್ಯವನ್ನು ಸಮಾಜದ ನಿಜಜೀವನದ ಬಿಂಬವೆಂದು ಭಾವಿಸುವುದಾದರೆ ಸ್ತ್ರೀ ಹೊರತಾದ ಸಮಾಜ ಮತ್ತು ಸಾಹಿತ್ಯ ಅಷ್ಟು ಸಂವೇದನಾಶೀಲ ಆಗಲಾರದು. ಓರ್ವ ಸಂವೇದನಾಶೀಲ ಬರಹಗಾರ್ತಿ ತನ್ನ ಇರುವಿಕೆಯ ಪರಿಸರದಲ್ಲಿ ಸ್ತ್ರೀಯನ್ನು ಸಾಹಿತ್ಯದ ಮೂಲಕ ಗ್ರಹಿಸುತ್ತಾಳೆ, ಕಾದಂಬರಿಯಂತಹ ಒಂದು ವಿಸ್ತಾರವಾದ ಚೌಕಟ್ಟಿನ ಭೂಮಿಕೆಯಲ್ಲಿ ಎ.ಪಿ.ಮಾಲತಿಯವರ ಕಾದಂಬರಿಗಳಲ್ಲಿ ಸ್ತ್ರೀ ಗ್ರಹಿಕೆ ಅಭಿವ್ಯಕ್ತಿಗಳು ಪ್ರತಿಪಾದಿಸುವ ಮೌಲ್ಯಗಳನ್ನು ತಿಳಿಯುವುದು ಇಲ್ಲಿನ ಬಹುಮುಖ್ಯ ಉದ್ದೇಶವಾಗಿದೆ.

ಎ.ಪಿ ಮಾಲತಿಯವರ ಕಥೆ, ಕಾದಂಬರಿಗಳ ಅಧ್ಯಯನದ ಮೂಲಕ ಹೆಣ್ಣಿನ ಮಾನಸಿಕ ಸ್ಥಿತಿ, ಕಾದಂಬರಿಗಳಲ್ಲಿ ವ್ಯಕ್ತವಾದ ಸಮಾಜ, ವಿವಾಹ ಸಂಬಂಧದಲ್ಲಿ ಸ್ತ್ರೀ ಅನುಭವಿಸುವ ಸವಾಲು, ಆದರ್ಶ ಪ್ರೇಮದ ಸ್ವರೂಪವನ್ನು ಅರಿಯುವ ಉದ್ದೇಶವನ್ನು ಹೊಂದಿದೆ. ಪ್ರೇಮದಲ್ಲಿ ಯುವಕ, ಯುವತಿಯರು ಅನುಭವಿಸುವ ಸಮಸ್ಯೆಗಳನ್ನು ಕಾದಂಬರಿಗಳ ಮೂಲಕ ತಿಳಿಯುವ ಉದ್ದೇಶವನ್ನು ಹೊಂದಿದೆ. ಕಾದಂಬರಿ ಮತ್ತು ಕಥೆಗಳಲ್ಲಿನ ನಿರೂಪಣ ತಂತ್ರಗಳನ್ನು ಪರಿಶೀಲಿಸುವುದು ಇಲ್ಲಿನ ಉದ್ದೇಶಗಳಲ್ಲಿ ಒಂದಾಗಿದೆ.

ವ್ಯಾಪ್ತಿ

ಎ.ಪಿ.ಮಾಲತಿ ಅವರು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಿಶಿಷ್ಟವಾದ ಸ್ಥಾನವನ್ನು ಸೃಷ್ಟಿಸಿಕೊಂಡವರು. ಜನಪ್ರಿಯ ಎಂಬ ಹೆಸರಿನಿಂದಲೇ ಸಾಮಾನ್ಯರ ಓದಿಗೆ ದಕ್ಕಿದವರು. ಕಥೆ,ಕಾದಂಬರಿಗಳನ್ನು ಬರೆದದ್ದು ಹೆಚ್ಚು

ಕಂಡಿದ್ದು ಕಡಿಮೆ. ಮೌಲ್ಯಯುತ ಕಾದಂಬರಿಗಳನ್ನು ಕೊಟ್ಟವರು. ಇವರನ್ನು ಸಮನ್ವಯದ ಲೇಖಕಿ ಎಂದು ಕರೆಯಲಾಗುತ್ತದೆ. ಈ ಅಧ್ಯಯನವು ಎ.ಪಿ.ಮಾಲತಿ ಅವರ ಸಮಗ್ರ ಅಧ್ಯಯನದ ವ್ಯಾಪ್ತಿಯನ್ನು ಹೊಂದಿದೆ. ಅವರ ಕಾದಂಬರಿಗಳಲ್ಲಿ ಸ್ತ್ರೀ ದೃಷ್ಟಿಕೋನ ಗಮನಾರ್ಹವಾದುದ್ದು ಮತ್ತು ಆಧುನಿಕ ಸ್ತ್ರೀ ಸಮಸ್ಯೆಗಳನ್ನು ಗರ್ಭಿಕರಿಸಿಕೊಂಡವುಗಳು. ಅವುಗಳಲ್ಲಿ ಅರ್ಧಾಂಗಿ, ಆಘಾತ, ಅನಿಶ್ಚಯ, ಮತ್ತು ಅತೃಪ್ತೆ, ಮಂದಾರ, ಪುನರ್ಮಿಲನ, ತಿರುಗಿದಚಕ್ರ, ಮಿನುಗದ ಚುಕ್ಕೆ, ಬದಲಾಗದವರು, ನುಪುರಗಾನ, ಅಚೆಜನಾ, ವಕ್ರರೇಖೆ, ಪುಣ್ಯದ ಎಣ್ಣೆ, ಹಸಿರು ಚಿಗುರು, ಖಾಲಿಮನೆ...... ಮುಂತಾದ ಅವರ ಸುಮಾರು ಇಪ್ಪತ್ತು ಕಾದಂಬರಿಗಳು, ಮೂವತ್ತು ಸಣ್ಣ ಕಥೆಗಳನ್ನು ವ್ಯಾಪ್ತಿಯಾಗಿರಿಕೊಂಡು ಅಲ್ಲಿನ ಸ್ತ್ರೀಯನ್ನು ಅವರ ಅಸ್ಮಿತೆಯ ಒಟ್ಟು ಗ್ರಹಿಕೆಗಾಗಿ ಅವರ ಕಾದಂಬರಿಗಳನ್ನು, ಸಣ್ಣ ಕಥೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.

ಎ.ಪಿ.ಮಾಲತಿ ಅವರ ಜೀವನ ಮತ್ತು ಸಾಹಿತ್ಯ

ಅಧ್ಯಾಯ : 1 ರಲ್ಲಿ ಎ.ಪಿ.ಮಾಲತಿ ಅವರ ಜೀವನ ಮತ್ತು ಸಾಹಿತ್ಯ.

ಬಾಲ್ಯಜೀವನ, ಶಿಕ್ಷಣ, ಮತ್ತು ಕೌಟುಂಬಿಕ ಜೀವನ, ಸಾಹಿತ್ಯಿಕ ಪ್ರೇರಣೆಗಳು, ಪ್ರಶಸ್ತಿ ಪುರಸ್ಕಾರಗಳು,ಸಾಹಿತ್ಯ ಸಮ್ಮೇಳನ, ಅಧ್ಯಕ್ಷ ಗೌರವ ಮತ್ತು ಅವರ ಸಾಹಿತ್ಯಿಕ ಚಿಂತನೆಗಳನ್ನು ತಿಳಿಸಲಾಗುವುದು.

ಅಧ್ಯಾಯ : 2 ರಲ್ಲಿ ಎ.ಪಿ.ಮಾಲತಿಯವರ ಸಾಹಿತ್ಯಿಕ ಕೊಡುಗೆ.

ಕಥೆಗಳು, ಕಾದಂರಿಗಳು, ಜೀವನ ಚರಿತ್ರೆ ಮತ್ತು ಇತರ ಕೃತಿಗಳ ಬಗ್ಗೆ ಅಧ್ಯಯನ ಮಾಡಲಾಗುವುದು.

ಅಧ್ಯಾಯ : 3 ರಲ್ಲಿ ಎ.ಪಿ.ಮಾಲತಿಯವರ ಕಥೆಗಳಲ್ಲಿ ಸ್ತ್ರೀ ಪಾತ್ರ ಚಿತ್ರಣ, ಸಾಮಾಜಿಕ ನೆಲೆ, ಕೌಟುಂಬಿಕ ನೆಲೆ, ಶೈಕ್ಷಣಿಕ ನೆಲೆ, ಸ್ತ್ರೀಪರ ಕಾಳಜಿಯ ಬಗೆಯನ್ನು ಅಧ್ಯಯನ ಮಾಡಲಾಗುವುದು.

ಅಧ್ಯಾಯ : 4 ಎ.ಪಿ.ಮಾಲತಿಯವರ ಕಾದಂಬರಿಗಲ್ಲಿ ಸ್ತ್ರೀ ಪಾತ್ರ ಚಿತ್ರಣ ಎಂಬ ಅಧ್ಯಾಯದಲ್ಲಿ ಕಾದಂಬರಿಕಾರ್ತಿಯ ಸಮಗ್ರ ಕಾದಂಬರಿಗಳು ಲಭ್ಯವಾಗುವುದರಿಂದ ಅವುಗಳಲ್ಲಿ ಕಂಡುಬರುವ ಸ್ತ್ರೀ ಪಾತ್ರಗಳನ್ನು ಮೇಲ್ವರ್ಗದ ಪಾತ್ರಗಳು, ಮಧ್ಯಮ ವರ್ಗದ ಪಾತ್ರಗಳು ಮತ್ತು ತಳವರ್ಗದ ಪಾತ್ರಗಳು ಎಂದು ವಿಭಾಗಿಸಿಕೊಂಡು ಸ್ತ್ರೀ ಪಾತ್ರಗಳ ವಿವರಗಳನ್ನು ನೀಡಲಾಗುವುದು. ಕಾದಂಬರಿಗಳಲ್ಲಿನ ಸ್ತ್ರೀ ಸಮಸ್ಯೆಗಳನ್ನು ಸಾಮಾಜಿಕ ನೆಲೆ, ಶೈಕ್ಷಣಿಕ ನೆಲೆ, ಪ್ರೇಮ ವಿವಾಹಗಳ ಸಂಬಂಧಗಳ ನೆಲೆ ಈ ವಿಭಾಗದ ಕ್ರಮದಲ್ಲಿ ಅಧ್ಯಯನ ನಡೆಸಲಾಗುವುದು.

ಅಧ್ಯಾಯ : 5 ರಲ್ಲಿ ಎ.ಪಿ.ಮಾಲತಿಯವರ ಕಥನ ಸಾಹಿತ್ಯದ ವಸ್ತು, ವಸ್ತುವಿನ ನೆಲೆ, ಭಾಷಾಶೈಲಿ, ಅಭಿವ್ಯಕ್ತಿ ನೆಲೆ ಮತ್ತು ಕಥೆ, ಕಾದಂಬರಿಯ ನಿರೂಪಣೆಯ ತಂತ್ರಗಳನ್ನು ಅಧ್ಯಯನ ನಡೆಸಲಾಗುವುದು.

ಸಮಾರೋಪ : ದಲ್ಲಿ ಅಧ್ಯಯನದ ಒಟ್ಟು ದೃಷ್ಟಿಯನ್ನು ಗ್ರಹಿಸುವುದರೊಂದಿಗೆ ಅಧ್ಯಯನದ ಫಲಿತಗಳನ್ನು ಕ್ರೋಢೀಕರಿಸಿ ನೀಡಲಗುವುದು.

ಅನುಬಂಧ : ದಲ್ಲಿ ಪರಾಮರ್ಶನ ಕೃತಿಗಳ, ಲೇಖನಗಳ ಪಟ್ಟಿ ಮತ್ತು ಎ.ಪಿ.ಮಾಲತಿಯವರ ಕುಟುಂಬದವರನ್ನು ಸಂದರ್ಶಿಸಿದ ವಿವರಗಳನ್ನು, ಛಾಯಾಚಿತ್ರಗಳನ್ನು ನೀಡಲಾಗುವುದು.